# ಕರ್ನಾಟಕ ಸರ್ಕಾರ
# ರಾಜ್ಯ ಅಬಕಾರಿ ಇಲಾಖೆ
# 2020-21 ನೇ ಸಾಲಿನ ಇಲಾಖಾ ವಾರ್ಷಿಕ ವರದಿ

(ದಿನಾಂಕ: 01-04-2020 ರಿಂದ 31-03-2021)

## ಅಧ್ಯಾಯ – 1
## ದೂರ ದೃಷ್ಟಿ, ಧ್ಯೇಯ, ಉದ್ದೇಶ ಮತ್ತು ಕರ್ತವ್ಯಗಳು

### 1.1 ದೂರ ದೃಷ್ಟಿ :

ಸುರಕ್ಷಿತವಲ್ಲದ ಮದ್ಯದ ಬಳಕೆಯನ್ನು ನಿಯಂತ್ರಿಸುವುದರ ಮೂಲಕ ಅಬಕಾರಿ ಆದಾಯದಲ್ಲಿ ಉತ್ತಮತೆಯನ್ನು ಸಾಧಿಸುವುದು ಮತ್ತು ಮದ್ಯ ಬಳಕೆದಾರರಿಗೆ ಆರೋಗ್ಯಕರ ವಾತಾವರಣದಲ್ಲಿ ಮದ್ಯದ ಸರಬರಾಜನ್ನು ಖಾತರಿಪಡಿಸುವುದು

### 1.2 ಧ್ಯೇಯ :

ಮದ್ಯಸಾರ, ಮದ್ಯಸಾರಯುಕ್ತ ತಯಾರಿಕೆಗಳು, ಬಳಕೆಯೋಗ್ಯ ಮದ್ಯ ಮತ್ತು ಇತರೆ ಮತ್ತು ಬರಿಸುವ ಪದಾರ್ಥಗಳ ವಹಿವಾಟು ಹಾಗೂ ಇವುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ, ಮಾರಾಟ ಮತ್ತು ಇತರೆ ಚಟುವಟಿಕೆಗಳನ್ನು ಕ್ರಮಗೊಳಿಸುವುದು ಮತ್ತು ಈ ಚಟುವಟಿಕೆಗಳಿಗೆ ಸಂಬಂಧಪಟ್ಟ ರಾಜ್ಯ ಅಬಕಾರಿ ರೀತಿ-ನೀತಿಯನ್ನು ಜಾರಿಗೊಳಿಸುವುದು ಹಾಗೂ ಸಂಬಂಧಿತ ತೆರಿಗೆ ಸಂಗ್ರಹಣೆಯ ಮೇಲುಸ್ತುವಾರಿ ಕೈಗೊಳ್ಳುವುದು.

### 1.3 ಉದ್ದೇಶಗಳು :

1. ರಾಜ್ಯದ ಬೊಕ್ಕಸಕ್ಕೆ ಆದಷ್ಟು ಹೆಚ್ಚಿನ ರಾಜಸ್ವವನ್ನು ಸಂಗ್ರಹಿಸುವುದು
2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟವನ್ನು ಕ್ರಮಬದ್ಧಗೊಳಿಸುವುದು
3. ಅಬಕಾರಿ ಸಂಬಂಧಿತ ಅಪರಾಧಗಳನ್ನು ನಿಯಂತ್ರಿಸಲು ಪರಿಣಾಮಕಾರಿ ಜಾರಿ ಮತ್ತು ತನಿಖೆ
4. ಸಮರ್ಥತೆಯನ್ನು ಉತ್ತಮಪಡಿಸಲು ತರಬೇತಿ ನೀಡುವುದು ಮತ್ತು ಇ-ಆಡಳಿತ ಉಪಕ್ರಮಗಳನ್ನು ರೂಪಿಸುವುದು.

### 1.4 ಕಾರ್ಯಗಳು :

1. ಅಬಕಾರಿ ರಾಜಸ್ವ ಸಂಗ್ರಹಣೆ
2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟಕ್ಕಾಗಿ ಸನ್ನದುಗಳನ್ನು ನೀಡುವುದು.
3. ನಿರ್ದಿಷ್ಟ ಅಬಕಾರಿ ಸನ್ನದು ಪ್ರದೇಶಗಳ ತಪಾಸಣೆ ಕೈಗೊಳ್ಳುವುದು, ನಿಯತವಾಗಿ ದಾಳಿ ಮತ್ತು ರಸ್ತೆ ಗಸ್ತುಗಳನ್ನು ನಡೆಸುವುದು.
4. ಇಲಾಖೆಯ ವಿವಿಧ ಆಡಳಿತ ಹಂತಗಳಲ್ಲಿನ ಸಾಧನೆಯನ್ನು ನಿಯತ ಮಧ್ಯಂತರ ಅವಧಿಗಳಲ್ಲಿ ಪುನರ್ವಿಮರ್ಶಿಸುವುದು.
5. ಅಧಿಕಾರಿಗಳು ಮತ್ತು ಸಿಬ್ಬಂದಿಯ ತರಬೇತಿ.
6. ಅಬಕಾರಿ ಪರಿಶೀಲನಾ ಪ್ರಮಾಣ ಪತ್ರಗಳು (EVC) ಮತ್ತು ರಹದಾರಿ ಪ್ರಮಾಣ ಪತ್ರಗಳ ಪರಿಶೀಲನೆ.
7. ಅಬಕಾರಿ ಅಪರಾಧ ಪ್ರಕರಣಗಳ ನೋಂದಣಿ, ತನಿಖೆ ಹಾಗೂ ಕಾನೂನು ಕ್ರಮ ಜರುಗಿಸುವುದು.
8. ಎಲ್ಲಾ ಅಬಕಾರಿ ಸಂಬಂಧಿತ ವಸ್ತುಗಳ ವಹಿವಾಟಿನ ಮೇಲುಸ್ತುವಾರಿ.
9. ಇಲಾಖೆಯ ಕಾರ್ಯಚಟುವಟಿಕೆಗಳ ಗಣಕೀಕರಣ.

## ಅ. ರಾಜ್ಯ ಮಟ್ಟದ ಅಧಿನಿಯಮಗಳು :

1. ಕರ್ನಾಟಕ ಅಬಕಾರಿ ಕಾಯ್ದೆ 1965.
2. ಮೇಲ್ಕಂಡ ಕಾಯ್ದೆ ಮೇರೆಗೆ ರಚಿತವಾದ ನಿಯಮ.
3. ನಾರ್ಕೋಟಿಕ್ ಡ್ರಗ್ಸ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ (ಕರ್ನಾಟಕ) ನಿಯಮಗಳು 1985.
4. ಕರ್ನಾಟಕ ಪ್ರಿವೆಂಶನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಆಫ್ ಬೂಟ್‌ಲೆಗ್ಗರ್ಸ್, ಡ್ರಗ್ ಅಫೆಂಡರ್ಸ್, ಗ್ಯಾಂಬ್ಲರ್ಸ್, ಗೂಂಡಾಸ್, ಇಮ್ಮಾರಲ್ ಟ್ರಾಫಿಕ್ ಅಫೆಂಡರ್ಸ್ ಅಂಡ್ ಸ್ಲಮ್ ಗ್ರಾಬರ್ಸ್ ಕಾಯ್ದೆ 1985.

## ಆ. ಕೇಂದ್ರ ಮಟ್ಟದ ಅಧಿನಿಯಮಗಳು :

ನಾರ್ಕೋಟಿಕ್ ಡ್ರಗ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ ಕಾಯ್ದೆ 1985 (1985ರ ಕೇಂದ್ರ ಕಾಯ್ದೆ ಸಂಖ್ಯೆ 61)

## 1.5 ಸಂಘಟನೆ ಮತ್ತು ರಚನೆ :

1.5 ಅಬಕಾರಿ ಆಯುಕ್ತರು ಹಿರಿಯ ಐ.ಎ.ಎಸ್. ಶ್ರೇಣಿಯವರಾಗಿದ್ದು ಇಲಾಖೆಯ ಮುಖ್ಯಸ್ಥರಾಗಿದ್ದಾರೆ. ಇಲಾಖೆಯ ಕೇಂದ್ರ ಸ್ಥಳವು ಬೆಂಗಳೂರಿನಲ್ಲಿರುತ್ತದೆ. ಇಲಾಖೆಯ ವ್ಯವಹಾರಗಳಲ್ಲಿ ಅಬಕಾರಿ ಆಯುಕ್ತರಿಗೆ ಸಹಕರಿಸಲು ಹೆಚ್ಚುವರಿ ಅಬಕಾರಿ ಆಯುಕ್ತರು (ಅಪರಾಧ ಮತ್ತು ಜಾರಿ)/(ಕೇಂದ್ರಸ್ಥಾನ ಮತ್ತು ತಪಾಸಣೆ), ಅಪರ ಆಯುಕ್ತರು (ಆಡಳಿತ), ಅಪರ ಅಬಕಾರಿ ಆಯುಕ್ತರು (ಭಾ.ತ.ಮ), ಅಲ್ಲದೆ ಅಬಕಾರಿ ಜಂಟಿ ಆಯುಕ್ತರು (ಡಿಸ್ಟಿಲರಿ ಮತ್ತು ಬ್ರಿವರಿ), ಒಬ್ಬರು ಅಬಕಾರಿ ಉಪ ಆಯುಕ್ತರು (ಕಾನೂನು), ಅಬಕಾರಿ ಆಯುಕ್ತರ ಕೇಂದ್ರ ಸ್ಥಾನಿಕ ಸಹಾಯಕರು I ಮತ್ತು II (ಅಬಕಾರಿ ಅಧೀಕ್ಷಕರ ಶ್ರೇಣಿ) ಒಳಗೊಂಡಂತೆ 5 ಅಬಕಾರಿ ಅಧೀಕ್ಷಕರು. 6 ಅಬಕಾರಿ ಉಪ ಅಧೀಕ್ಷಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ನಿಯೋಜನೆ ಮೇರೆಗೆ ಒಬ್ಬರು ಜಂಟಿ/ಉಪ ನಿರ್ದೇಶಕರು (ಸಾಂಖ್ಯಿಕ), ಒಬ್ಬರು ಸಹಾಯಕ ನಿರ್ದೇಶಕರು (ಸಾಂಖ್ಯಿಕ), ಮಹಾಲೇಖಪಾಲರ ಕಛೇರಿಯಿಂದ ನಿಯೋಜನೆ ಮೇರೆಗೆ ಒಬ್ಬರು ಹಿರಿಯ ಲೆಕ್ಕಾಧಿಕಾರಿಗಳು, ಒಬ್ಬರು ಸಹಾಯಕ ಲೆಕ್ಕಾಧಿಕಾರಿಗಳು ಮತ್ತು ಇಬ್ಬರು ಆಡಿಟ್ ಅಧಿಕಾರಿಗಳು (ಲೆಕ್ಕ ಪರಿಶೋಧನೆ) ಅಬಕಾರಿ ಆಯುಕ್ತರಿಗೆ ಸಹಾಯಕರಾಗಿರುತ್ತಾರೆ.

## 1.5.2. ಜಾರಿ ಮತ್ತು ತನಿಖಾ ವಿಭಾಗಗಳು :

ಮುಂದುವರೆದಂತೆ, ಇಲಾಖೆಯ ಆಡಳಿತಾತ್ಮಕ ಕಾರ್ಯಕ್ಷಮತೆ ಹೆಚ್ಚಿಸಲು ಹಾಗೂ ಜಾರಿ ಮತ್ತು ತನಿಖೆ ಕೆಲಸ ನಿರ್ವಹಣೆಯನ್ನು ಚುರುಕುಗೊಳಿಸಲು ರಾಜ್ಯವನ್ನು 7 ವಿಭಾಗಗಳನ್ನಾಗಿ ವಿಂಗಡಿಸಿದೆ. ಪ್ರತಿಯೊಂದು ವಿಭಾಗವು ಅಬಕಾರಿ ಜಂಟಿ ಆಯುಕ್ತರವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಪ್ರತಿ ವಿಭಾಗದ ಅಧಿಕಾರ ವ್ಯಾಪ್ತಿ ಈ ಕೆಳಕಂಡಂತಿದೆ.

| ಕ್ರ.ಸಂ. | ವಿಭಾಗಗಳು | ವ್ಯಾಪ್ತಿಗೊಳಪಡುವ ಜಿಲ್ಲೆಗಳು |
|---|---|---|
| 1. | ಬೆಂಗಳೂರು ಉತ್ತರ ವಿಭಾಗ | ಬೆಂಗಳೂರು ನಗರ ಜಿಲ್ಲೆ–1 (ಬಿಯುಡಿ-1), ಬೆಂಗಳೂರು ನಗರ ಜಿಲ್ಲೆ–2(ಬಿಯುಡಿ–2), ಬೆಂಗಳೂರು ನಗರ ಜಿಲ್ಲೆ–3 (ಬಿಯುಡಿ–3), ಬೆಂಗಳೂರು ನಗರ ಜಿಲ್ಲೆ–4 (ಬಿಯುಡಿ–4), ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳು. |

| | | |
|---|---|---|
| 2. | ಬೆಂಗಳೂರು ದಕ್ಷಿಣ ವಿಭಾಗ | ಬೆಂಗಳೂರು ನಗರ ಜಿಲ್ಲೆ – 5 (ಬಿಯುಡಿ-5), ಬೆಂಗಳೂರು ನಗರ ಜಿಲ್ಲೆ–6 (ಬಿಯುಡಿ-6), ಬೆಂಗಳೂರು ನಗರ ಜಿಲ್ಲೆ–7 (ಬಿಯುಡಿ-7), ಬೆಂಗಳೂರು ನಗರ ಜಿಲ್ಲೆ–8 (ಬಿಯುಡಿ-8), ಕೋಲಾರ ಮತ್ತು ರಾಮನಗರ ಜಿಲ್ಲೆಗಳು. |
| 3. | ಬೆಳಗಾವಿ ವಿಭಾಗ | ಬೆಳಗಾವಿ ಉತ್ತರ, ಬೆಳಗಾವಿ ದಕ್ಷಿಣ, ವಿಜಯಪುರ, ಬಾಗಲಕೋಟೆ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳು. |
| 4. | ಕಲಬುರಗಿ ವಿಭಾಗ | ಕಲಬುರಗಿ, ರಾಯಚೂರು ಮತ್ತು ಬೀದರ್, ಯಾದಗಿರಿ ಜಿಲ್ಲೆಗಳು. |
| 5. | ಹೊಸಪೇಟೆ ವಿಭಾಗ | ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಕೊಪ್ಪಳ ಮತ್ತು ಗದಗ ಜಿಲ್ಲೆಗಳು. |
| 6. | ಮಂಗಳೂರು ವಿಭಾಗ | ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳು. |
| 7. | ಮೈಸೂರು ವಿಭಾಗ | ಮೈಸೂರು ನಗರ, ಮೈಸೂರು ಗ್ರಾಮಾಂತರ, ಚಾಮರಾಜನಗರ, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು. |

**1.5.3** ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಓರ್ವ ಅಬಕಾರಿ ಉಪ ಆಯುಕ್ತರು ಕಾರ್ಯನಿರ್ವಹಿಸುತ್ತಿದ್ದು, ಸದರಿ ಅಧಿಕಾರಿಯವರು, ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965 ಮತ್ತು ಇತರೆ ಶಾಸನಬದ್ಧ ಕಾಯ್ದೆಗಳು ಹಾಗೂ ನಿಯಮಗಳಡಿಯಲ್ಲಿ ಅಬಕಾರಿ ಉಪ ಆಯುಕ್ತರು ಶಾಸನಬದ್ಧ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಜಿಲ್ಲೆಗಳಲ್ಲಿನ ಜಾರಿ ತನಿಖಾ ಕಾರ್ಯ ಚಟುವಟಿಕೆಗಳು ಅಬಕಾರಿ ಉಪ ಆಯುಕ್ತರ ಜವಾಬ್ದಾರಿಯಾಗಿರುತ್ತದೆ. ರಾಜ್ಯದಲ್ಲಿ ಒಟ್ಟು 39 ಅಬಕಾರಿ ಜಿಲ್ಲೆಗಳಿದ್ದು ಪ್ರತಿ ಜಿಲ್ಲೆಗೆ ಒಬ್ಬ ಅಬಕಾರಿ ಉಪ ಆಯುಕ್ತರು ಇರುತ್ತಾರೆ. ಕೇಂದ್ರ ಕಛೇರಿಯಲ್ಲಿ ಒಂದು ಹುದ್ದೆ ಇದ್ದು, ಒಟ್ಟು 40 ಅಬಕಾರಿ ಉಪ ಆಯುಕ್ತರ ಹುದ್ದೆಗಳು ಕಾರ್ಯನಿರ್ವಹಿಸುತ್ತಿವೆ.

**1.5.4** ಅಬಕಾರಿ ಅಧೀಕ್ಷಕರುಗಳು, ಅಬಕಾರಿ ಉಪ ಅಧೀಕ್ಷಕರುಗಳು, ಅಬಕಾರಿ ನಿರೀಕ್ಷಕರುಗಳು, ಅಬಕಾರಿ ಉಪ ನಿರೀಕ್ಷಕರುಗಳು, ಹಿರಿಯ ರಕ್ಷಕರು ಮತ್ತು ರಕ್ಷಕರು ಇಲಾಖೆಯ ಜಾರಿ ಮತ್ತು ತನಿಖಾ ಚಟುವಟಿಕೆ ನಡೆಸುವ ಹುದ್ದೆಗಳಾಗಿರುತ್ತವೆ. ಅಬಕಾರಿ ಇಲಾಖೆಯಲ್ಲಿ 76 ಉಪ ವಿಭಾಗಗಳು ಅಬಕಾರಿ ಉಪ ಅಧೀಕ್ಷಕರ ಮುಖ್ಯಸ್ಥಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಸದರಿ ಅಬಕಾರಿ ಉಪ ಅಧೀಕ್ಷಕರುಗಳು ಜಿಲ್ಲೆಯ ಅಬಕಾರಿ ಉಪ ಆಯುಕ್ತರ ಆಡಳಿತ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅಬಕಾರಿ ಅಧೀಕ್ಷಕರುಗಳು/ಅಬಕಾರಿ ಉಪ ಅಧೀಕ್ಷಕರುಗಳು/ ಅಬಕಾರಿ ನಿರೀಕ್ಷಕರ ವೃಂದಗಳಲ್ಲಿನ ಅಧಿಕಾರಿಗಳಿಗೆ ಡಿಸ್ಟಿಲರೀಸ್, ಬ್ರಿವರೀಸ್ ಮತ್ತು ವೈನರೀಸ್ ಕಛೇರಿಗಳಲ್ಲಿ ವ್ಯವಹಾರಗಳ ಮೇಲ್ವಿಚಾರಣೆ ನೋಡಲು ಮತ್ತು ಅಬಕಾರಿ ಕಾನೂನನ್ನು ಜಾರಿಗೊಳಿಸಲು ತೈನಾತಿಸಲ್ಪಟ್ಟ ಇತರೆ ಸಿಬ್ಬಂದಿಗಳು ಸಹಕರಿಸುತ್ತಾರೆ. ಅಬಕಾರಿ ಇಲಾಖೆಯು ಮುಖ್ಯ ರಾಸಾಯನಿಕ ತಜ್ಞರ ಮುಖ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಕೇಂದ್ರ ರಾಸಾಯನಿಕ ಪ್ರಯೋಗಾಲಯವನ್ನೂ ಸಹ ಹೊಂದಿದೆ.

## 1.5.5 ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಮೂಲಕ ಸಗಟು ಮದ್ಯ ವಿತರಣೆ.

ಸಗಟು ಮದ್ಯ ವಿತರಣೆಯನ್ನು ವ್ಯವಸ್ಥಿತಗೊಳಿಸುವ ಹಾಗೂ ಮದ್ಯ ವಹಿವಾಟಿನಲ್ಲಿನ ಅಕ್ರಮ ದಂಧೆಯನ್ನು ತಡೆಗಟ್ಟುವ ಉದ್ದೇಶದಿಂದ 2003 ರಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವನ್ನು ಸಗಟು ವಹಿವಾಟಿನ ಏಕೈಕ ಸಂಸ್ಥೆಯಾಗಿ ಸ್ಥಾಪಿಸಲಾಗಿರುತ್ತದೆ. ಈ ನಿಗಮವು ರಾಜ್ಯಾದ್ಯಂತ ಒಟ್ಟು 71 ಮದ್ಯ ವಿತರಣಾ ಘಟಕಗಳನ್ನು ಹೊಂದಿರುತ್ತದೆ.

# ಅಧ್ಯಾಯ – 2
# ಇಲಾಖೆಯ ಸಾಧನೆಗಳು :

## 2.1 ಆರ್ಥಿಕ :

ಅಬಕಾರಿ ರಾಜಸ್ವವು ಪ್ರಮುಖವಾಗಿ ಈ ಕೆಳಕಂಡ ಮೂಲಗಳಿಂದ ಸಂಗ್ರಹವಾಗುತ್ತದೆ.

1. ಐಎಂಎಲ್ ಮತ್ತು ಬೀರ್ ಮೇಲಿನ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ.
2. ಡಿಸ್ಟಿಲರಿ, ಬ್ರೀವರಿ ಮತ್ತು ವೈನ್ ತಯಾರಿಕಾ ಘಟಕಗಳು ಮತ್ತು ಎಲ್ಲಾ ವಿಧದ ಮದ್ಯ ಮಾರಾಟದ ಸನ್ನದುಗಳ ಸನ್ನದು ಶುಲ್ಕ.
3. ಅಪರಾಧ ಮೊಕದ್ದಮೆಗಳ ದಂಡ ವಿಧಿಸಿ ಇತ್ಯರ್ಥ್ಯ ಮಾಡುವುದರಿಂದ ಮತ್ತು ಮುಟ್ಟುಗೋಲು ಹಾಕಿಕೊಂಡ ವಸ್ತುಗಳ ವಿಲೇವಾರಿಯಿಂದ ಸಂಗ್ರಹವಾಗುವ ಹಣ.
4. ಇತರೆ.

ಅಬಕಾರಿ ರಾಜಸ್ವ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. 1967–68ರ ಆರ್ಥಿಕ ವರ್ಷದಲ್ಲಿ ರೂ. 7.11 ಕೋಟಿ ಇದ್ದ ರಾಜಸ್ವವು 2019–20 ನೇ ಸಾಲಿಗೆ ರೂ. **21,583.95** ಕೋಟಿಗಳಿಗೆ ಏರಿಕೆಯಾಗಿರುತ್ತದೆ. **2020–21**ನೇ ಸಾಲಿನಲ್ಲಿ **ರೂ.23,332.10** ಕೋಟಿಗಳಷ್ಟು ರಾಜಸ್ವ ಸಂಗ್ರಹಣೆಯಾಗಿದ್ದು, ಕಳೆದ ಸಾಲಿಗೆ ಇದೇ ಅವಧಿಗೆ ಹೋಲಿಸಿದರೆ ರೂ. **1,748.15** ಕೋಟಿಗಳ ಹೆಚ್ಚಿನ ರಾಜಸ್ವ ಸಂಗ್ರಹಣೆಯಾಗಿದ್ದು, ಶೇಕಡಾ **8.10** ರಷ್ಟು ಹೆಚ್ಚಳ ಆಗಿರುತ್ತದೆ. ಇಲಾಖೆಯ ಸಂಬಳ ಹಾಗೂ ಸಂಬಳೇತರ ಬಾಬುಗಳಿಗೆ ರೂ. **222.87** ಕೋಟಿ ವೆಚ್ಚವಾಗಿದ್ದು, ಇದು ಆದಾಯದ ಶೇಕಡಾ **0.96** ರಷ್ಟು ಮಾತ್ರವಾಗಿದೆ.

2018–19 ರಿಂದ 2020–21 ನೇ ಸಾಲಿನ ವರೆಗೆ ಅಬಕಾರಿ ರಾಜಸ್ವದ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ. ಕೋಟಿಗಳಲ್ಲಿ)

| ಕ್ರ.ಸಂ. | ವಿವರಗಳು | 2018–19 | 2019–20 | 2020–21 |
|---|---|---|---|---|
| 1. | ಭಾ.ತ.ಮ | 16,894.83 | 17899.01 | 20217.80 |
| 2. | ಬೀರ್ | 2,396.29 | 3018.90 | 2438.16 |
| 3. | ಇತರೆ | 652.81 | 666.04 | 676.14 |
| **ಒಟ್ಟು** | | **19,943.93** | **21,583.95** | **23,332.10** |

## 2.2 ವೆಚ್ಚ :

2018–19ನೇ ಸಾಲಿನಿಂದ 2020–21 ನೇ ಸಾಲಿನವರೆಗೆ ರಾಜಸ್ವ ಸಂಗ್ರಹಣೆ ಮತ್ತು ಅಧಿಕಾರಿ/ನೌಕರರ ಸಂಬಳ ಹಾಗೂ ಇತರೆ ಬಾಬ್ತುಗಳಲ್ಲಿನ ಒಟ್ಟು ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ.

(ಕೋಟಿ ರೂ.ಗಳಲ್ಲಿ)

| ವಿವರಗಳು | 2018–19 | 2019–20 | 2020–21 |
|---|---|---|---|
| ಅಬಕಾರಿ ರಾಜಸ್ವ ಸಂಗ್ರಹಣೆ | 19,943.93 | 21,583.95 | 23,332.10 |
| ಒಟ್ಟು ವೆಚ್ಚ | 172.97 | 200.17 | 222.87 |
| **ಶೇಕಡವಾರು ವೆಚ್ಚ** | **0.87** | **0.93** | **0.96** |

## 2.3 ಭೌತಿಕ

### 2.3.1 ಕಾಕಂಬಿ, ಮದ್ಯಸಾರ, ಐಎಂಎಲ್, ಬೀರ್ ಮತ್ತು ವೈನ್ ನ ಉತ್ಪಾದನೆ:-

22 2018-19 ರಿಂದ 2020-21ನೇ ಸಾಲಿನವರೆಗೆ ಕಾಕಂಬಿ, ಮದ್ಯಸಾರ, ಐ.ಎಂ.ಎಲ್, ಬೀರ್ ಮತ್ತು ವೈನ್ ಉತ್ಪಾದನೆಯ ವಿವರಗಳು ಈ ಕೆಳಕಂಡಂತಿವೆ.

(ಲಕ್ಷ ಬಲ್ಕ್ ಲೀ. ಗಳಲ್ಲಿ)

| ಕ್ರ.ಸಂ. | ವಿವರ | 2018-19 | 2019-20 | 2020-21 |
|---|---|---|---|---|
| 1 | ಕಾಕಂಬಿ(ಲಕ್ಷ ಮೆಟ್ರಿಕ್ ಟನ್) | 17.21 | 24.05 | 30.81 |
| 2 | ಮದ್ಯಸಾರ | 5980.19 | 5267.65 | 4353.24 |
| 3 | ಐ.ಎಂ.ಎಲ್. | 5241.60 | 5337.33 | 4920.83 |
| 4 | ಬೀರ್ | 2680.19 | 2681.15 | 2169.99 |
| 5 | ವೈನ್ | 72.16 | 56.49 | 55.35 |

**2.3.2** 2018-19 ರಿಂದ 2020-21ನೇ ಸಾಲಿನವರೆಗೆ ಐ.ಎಂ.ಎಲ್. ಮತ್ತು ಬೀರ್ ಮಾರಾಟದ ವಿವರಗಳು ಈ ಕೆಳಕಂಡಂತಿದೆ.

(ಲಕ್ಷ ಪೆಟ್ಟಿಗೆಗಳಲ್ಲಿ)

| ಕ್ರ.ಸಂ. | ವಿವರ | 2018-19 | 2019-20 | 2020-21 |
|---|---|---|---|---|
| 1 | ಐ.ಎಂ.ಎಲ್. | 569.92 | 600.92 | 583.23 |
| | **ತಿಂಗಳ ಸರಾಸರಿ** | **47.49** | **50.08** | **48.60** |
| 2 | ಬೀರ್ | 300.85 | 289.60 | 237.82 |
| | **ತಿಂಗಳ ಸರಾಸರಿ** | **25.07** | **24.13** | **19.82** |

### 2.3.3. ಅಪರಾಧ ಮತ್ತು ಜಾರಿ :-

ಪ್ರಸ್ತುತ ವರ್ಷದಲ್ಲಿ ಅಬಕಾರಿ ನಿಯಮಗಳ ಉಲ್ಲಂಘನೆ ತಡೆಗಟ್ಟಲು ಇಲಾಖೆಯ ಅಧಿಕಾರಿಗಳು ಒಟ್ಟು 89,151 ದಾಳಿಗಳನ್ನು ನಡೆಸಿ 34,709 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಈ ಸಂದರ್ಭದಲ್ಲಿ 20,965 ಆರೋಪಿಗಳನ್ನು ಬಂಧಿಸಿರುವುದಲ್ಲದೆ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದ 1,897 ವಾಹನಗಳನ್ನು ಜಪ್ತು ಮಾಡಲಾಗಿರುತ್ತದೆ. ದಾಳಿ ಸಮಯದಲ್ಲಿ ವಶಪಡಿಸಿಕೊಳ್ಳಲಾದ ಅಬಕಾರಿ ವಸ್ತುಗಳ ವಿವರ ಈ ಕೆಳಕಂಡಂತಿವೆ.

| ಕ್ರ.ಸಂ. | ವಸ್ತುಗಳು | ಪ್ರಮಾಣ (ಲೀ.ಗಳಲ್ಲಿ) |
|---|---|---|
| 1. | ಐಎಂಎಲ್ | 1,75,059 |
| 2. | ಬೀರ್ : ವೈನ್ : ಸೇಂದಿ : ಫೆನ್ನಿ | 1,02,192 |
| 3. | ಮದ್ಯಸಾರ : ಎನ್‌ಎಸ್ : ಡಿ.ಎಸ್ | 27,953 |
| 4. | ನಾಶಪಡಿಸಿದ ಕಳ್ಳಭಟ್ಟಿ | 6,266 |
| 5. | ವಶಪಡಿಸಿಕೊಂಡು ನಾಶಪಡಿಸಿದ ಬೆಲ್ಲದ ಕೊಳೆ | 27,527 |
| 6. | ಗಾಂಜಾ (ಕೆ.ಜಿಗಳಲ್ಲಿ) : ಹಸಿ ಗಾಂಜಾ (ಕೆ.ಜಿಗಳಲ್ಲಿ) : ಗಾಂಜಾ ಗಿಡ (ಸಂಖ್ಯೆಗಳಲ್ಲಿ) | 2199 : 2035 : 4574 |

### 2.3.4. ಡಿಸ್ಟಿಲರಿ, ಬ್ರೀವರಿ ಹಾಗೂ ವೈನರಿ ಘಟಕಗಳು :-

2020-21ನೇ ಅಬಕಾರಿ ಸಾಲಿಗೆ ನವೀಕರಿಸಲಾದ ಡಿಸ್ಟಿಲರಿ, ಬ್ರೀವರಿ ಹಾಗೂ ವೈನರಿ ಘಟಕಗಳ ಸಂಖ್ಯೆ ಈ ಕೆಳಕಂಡಂತಿದೆ.

| ಕ್ರ.ಸಂ. | ಘಟಕ | ಒಟ್ಟು ಘಟಕಗಳ ಸಂಖ್ಯೆ |
|---|---|---|
| 1. | ಐಎಂಎಲ್ ತಯಾರಿಕಾ ಘಟಕಗಳು | 30 |
| 2. | ಬ್ರಿವರಿಗಳು | 10 |
| 3. | ವೈನರಿಗಳು | |
| | ಅ) ಫೋರ್ಟಿಫೈಡ್ ವೈನ್ | 04 |
| | ಆ) ಫ್ರೂಟ್ ವೈನ್ | 13 |
| | ಇ) ಫೋರ್ಟಿಫೈಡ್ ವೈನ್ ಮತ್ತು ಫ್ರೂಟ್ ವೈನ್ (ಎರಡು ಸೇರಿ) | 05 |
| 4. | ಮೈಕ್ರೋಬ್ರೀವರಿ | 60 |
| **ಒಟ್ಟು** | | **122** |

### 2.3.5 ಮದ್ಯ ಮಾರಾಟ ಸನ್ನದುಗಳು :-

ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳ 1968 ರಂತೆ ಮಂಜೂರು ಮಾಡಲಾದ ವಿವಿಧ ರೀತಿಯ ಮದ್ಯ ಮಾರಾಟ ಸನ್ನದುಗಳ ಸಂಖ್ಯೆ ಈ ಕೆಳಕಂಡಂತಿದೆ:

| ಕ್ರ.ಸಂ | ಸನ್ನದುಗಳ ವಿವರ | 2018-19 | 2019-20 | 2020-21 |
|---|---|---|---|---|
| 1. | ಸಿ.ಎಲ್-2 (ಚಿಲ್ಲರೆ ಅಂಗಡಿಗಳು) | 3940 | 3954 | 3968 |
| 2. | ಸಿ.ಎಲ್-4 (ಕ್ಲಬ್‌ಗಳು) | 244 | 250 | 263 |
| 3. | ಸಿಎಲ್-6ಎ (ಸ್ಟಾರ್ ಹೋಟೆಲ್‌ಗಳು) | 75 | 78 | 78 |
| 4. | ಸಿ.ಎಲ್-7 (ಹೋಟೆಲ್ ಮತ್ತು ವಸತಿಗೃಹ) | 1226 | 1419 | 1572 |
| 5. | ಸಿಎಲ್-8 (ಮಿಲಿಟರಿ ಕ್ಯಾಂಟೀನ್ ಮಳಿಗೆ) | 63 | 67 | 69 |
| 6. | ಸಿ.ಎಲ್-9 (ಬಾರ್ ಮತ್ತು ರೆಸ್ಟೋರೆಂಟ್) | 3606 | 3616 | 3620 |
| 7. | ಸಿಎಲ್-11ಸಿ (ಎಂ.ಎಸ್.ಐ.ಎಲ್. ಮದ್ಯ ಮಾರಾಟ ಮಳಿಗೆಗಳು) | 759 | 829 | 901 |
| 8. | ಆರ್.ವಿ.ಬಿ. (ರಿಟೈಲ್ ವೆಂಡ್ ಆಫ್ ಬಿಯರ್) | 526 | 582 | 597 |
| 9. | ವೈನ್ ಟವರ್ನ್ | 247 | 237 | 206 |
| 10. | ವೈನ್ ಬೋಟಿಕ್ | 79 | 82 | 90 |
| 11. | ಮೈಕ್ರೋ ಬ್ರೀವರಿ | 55 | 62 | 59 |
| 12. | ಇತರೆ | 36 | 36 | 34 |
| **ಒಟ್ಟು** | | **10,856** | **11,212** | **11,457** |

### 2.3.8 ಸೇಂದಿ

ಸೇಂದಿ ಉತಾರುದಾರರ ಸಹಕಾರ ಸಂಘಗಳ ಮೂಲಕ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಸೇಂದಿ ಮಾರಾಟ ಮಾಡಲು ಅನುಮತಿ ನೀಡಲಾಗಿರುತ್ತದೆ. ಇದರಿಂದ ಸಂಗ್ರಹವಾಗುವ ರಾಜ್ಯಸ್ವವು ಒಟ್ಟು ರಾಜ್ಯಸ್ವಕ್ಕೆ ಹೋಲಿಸಿದರೆ ಗೌಣವಾಗಿದೆ.

### 2.3.9 ಎಂಎಸ್ಐಎಲ್ ಸಂಸ್ಥೆಯ ಮೂಲಕ ಮದ್ಯ ಮಾರಾಟ:-

ಮದ್ಯ ಮಾರಾಟದಲ್ಲಿ ಎಂ.ಆರ್.ಪಿ ಉಲ್ಲಂಘನೆ ಪ್ರಕರಣಗಳನ್ನು ಹತೋಟಿಗೆ ತರುವ ದೃಷ್ಟಿಯಿಂದ ಸರ್ಕಾರವು ಮೊದಲನೆ ಹಂತವಾಗಿ 463 ಸಿ.ಎಲ್ 11-ಸಿ ಸನ್ನದುಗಳನ್ನು ಎಂಎಸ್ಐಎಲ್ ಸಂಸ್ಥೆಯವರಿಗೆ ಹಂಚಿಕೆ ಮಾಡಿದ್ದು, ಅದರಲ್ಲಿ 430 ಸನ್ನದುಗಳನ್ನು ಆರಂಭಿಸಲಾಗಿರುತ್ತದೆ. ಎರಡನೇ ಹಂತದಲ್ಲಿ ಎಂಎಸ್ಐಎಲ್ ಸಂಸ್ಥೆಯವರಿಗೆ 900 ಸಿ.ಎಲ್ 11-ಸಿ ಸನ್ನದು ತೆರೆಯಲು ಸರ್ಕಾರದಿಂದ ಹಂಚಿಕೆಯಾಗಿರುತ್ತದೆ. ಅದರಲ್ಲಿ 542 ಸನ್ನದುಗಳನ್ನು ಆರಂಭಿಸಲಾಗಿರುತ್ತದೆ.

# ಅಧ್ಯಾಯ – 3

## ಸಾರ್ವಜನಿಕ ಉದ್ದಿಮೆಗಳು, ಸೊಸೈಟಿಗಳು ಮತ್ತು ವಿಶೇಷ ಉದ್ದೇಶಿತ ವಾಹನಗಳ ಸಾಧನೆ

– ಅಬಕಾರಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ –

# ಅಧ್ಯಾಯ –4

## ತಿದ್ದುಪಡಿ ಮತ್ತು ನೂತನ ಶಾಸನ ಕ್ರಮಗಳು

### 4.1 ತಿದ್ದುಪಡಿಗಳು :

1. ಸರ್ಕಾರದ ಅಧಿಸೂಚನೆ ಸಂಖ್ಯೆ: FD 04 PES 2020 ದಿನಾಂಕ: 06.05.2020 ರಂತೆ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ರ ಶೆಡ್ಯೂಲ್ *ಡಿ* ಗೆ ತಿದ್ದುಪಡಿ ತಂದು ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲಾಗಿದೆ.
2. ಸರ್ಕಾರದ ಅಧಿಸೂಚನೆ ಸಂಖ್ಯೆ: FD 03 PES 2020 ದಿನಾಂಕ: 26.08.2020 ರಂತೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 23 ಕ್ಕೆ ತಿದ್ದುಪಡಿ ತಂದು ಒಂದನೇ ಪರಂತುಕದ clause (c) ರಲ್ಲಿರುವ ಗೊಂದಲವನ್ನು ನಿವಾರಿಸಲು ಮತ್ತು ಎಂಎಸ್ಐಎಲ್ ಸಂಸ್ಥೆಗೆ ನೀಡುವ ಚಿಲ್ಲರೆ ಮದ್ಯದಂಗಡಿ ಸಿಎಲ್-11 (ಸಿ) ಸನ್ನದುಗಳನ್ನು ಜಿಲ್ಲೆಯ ಒಳಗೆ/ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಒಳಗೆ ಒಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಿಂದ ಇನ್ನೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸ್ಥಳಾಂತರಿಸಲು ಅವಕಾಶ ಕಲ್ಪಿಸಲಾಗಿದೆ.

### 4.2 ವರದಿಗಳು ಮತ್ತು ಪ್ರಕಟಣೆಗಳು :

ಪ್ರತಿ ವರ್ಷ ಅಬಕಾರಿ ವರ್ಷ ಕೊನೆಗೊಂಡ ನಂತರ ಅಬಕಾರಿ ರಾಜಸ್ವ, ಮದ್ಯ ಉತ್ಪಾದನೆ, ಮಾರಾಟ, ಆಮದು ಮತ್ತು ರಫ್ತು, ಪ್ರಚಲಿತ ಲೈಸೆನ್ಸ್ ಶುಲ್ಕ ಮತ್ತು ಅಬಕಾರಿ ಸುಂಕದ ವಿವರಗಳು, ಅಪರಾಧ ಮತ್ತು ಜಾರಿ ಚಟುವಟಿಕೆಗಳು, ವಿವಿಧ ಸನ್ನದುಗಳ ನವೀಕರಣ, ಇಲಾಖೆಯ ಅಧಿಕಾರಿಗಳ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸ ಈ ವಿವರಗಳನ್ನು ಒಳಗೊಂಡ **'ಅಬಕಾರಿ ಅಂಕಿ ಅಂಶಗಳ ವರದಿ'**ಯನ್ನು ತರಲಾಗುತ್ತಿದೆ.

# ಅಧ್ಯಾಯ - 5

## ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತದಲ್ಲಿನ ಸಾಧನೆಗಳು

5.1 ಇಲಾಖೆಯಲ್ಲಿ ಮಾರ್ಚ್ **2021ರ ಅಂತ್ಯದ** ವರೆಗೆ ಒಟ್ಟು **5,811** ಮಂಜೂರಾದ ಹುದ್ದೆಗಳಿದ್ದು, ಅದರಲ್ಲಿ **4,080** ಹುದ್ದೆಗಳನ್ನು ಭರ್ತಿಮಾಡಲಾಗಿದ್ದು, ಇನ್ನುಳಿದ **1,731** ಹುದ್ದೆಗಳು ಖಾಲಿಯಿರುತ್ತವೆ. ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ. | ಪದನಾಮ | ವೇತನ ಶ್ರೇಣಿ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ |
|---|---|---|---|---|---|
| 1 | ಅಬಕಾರಿ ಆಯುಕ್ತರು (ಭಾ.ಆ.ಸೇ) | 144200-218200 | 1 | 1 | 0 |
| 2 | ಹೆಚ್ಚುವರಿ ಅಬಕಾರಿ ಆಯುಕ್ತರು (ಭಾ.ಆ.ಸೇ) (ಕೇಂದ್ರಸ್ಥಾನ ಮತ್ತು ತಪಾಸಣೆ) | 67700-208700 | 1 | 1 | 0 |
| 3 | ಅಬಕಾರಿ ಅಪರ ಆಯುಕ್ತರು (ಭಾ.ಆ.ಸೇ/ಕ.ಆ.ಸೇ) | 74400-109600 | 1 | 1 | 0 |
| 4 | ಹೆಚ್ಚುವರಿ ಅಬಕಾರಿ ಆಯುಕ್ತರು | 90500-123300 | 2 | 2 | 0 |
| 5 | ಅಬಕಾರಿ ಜಂಟಿ ಆಯುಕ್ತರು | 82000-117700 | 8 | 4 | 4 |
| 6 | ಅಬಕಾರಿ ಜಂಟಿ/ಉಪ ಆಯುಕ್ತರು (ಆಡಳಿತ) | 74400-109600 | 1 | 0 | 1 |
| 7 | ಅಬಕಾರಿ ಉಪ ಆಯುಕ್ತರು | 74400-109600 | 43 | 38 | 5 |
| 8 | ಜಂಟಿ ನಿರ್ದೇಶಕರು (ಸಾಂಖ್ಯಿಕ) | 74400-109600 | 1 | 1 | 0 |
| 9 | ಹಿರಿಯ ಲೆಕ್ಕಾಧಿಕಾರಿಗಳು | 67700-208700 | 1 | 1 | 0 |
| 10 | ಹಿರಿಯ ಆಂತರಿಕ ಪರಿಶೋಧಕರು | 56100-177500 | 1 | 1 | 0 |
| 11 | ಅಬಕಾರಿ ಅಧೀಕ್ಷಕರು | 52650-97100 | 86 | 40 | 46 |
| 12 | ಮುಖ್ಯ ರಾಸಾಯನಿಕ ತಜ್ಞರು | 52650-97100 | 1 | 1 | 0 |
| | **ಗ್ರೂಪ್-ಎ ಒಟ್ಟು** | | **147** | **91** | **56** |
| 13 | ಸಹಾಯಕ ನಿರ್ದೇಶಕರು(ಸಾಂಖ್ಯಿಕ) | 43100-83900 | 1 | 1 | 0 |
| 14 | ಅಬಕಾರಿ ಉಪ ಅಧೀಕ್ಷಕರು | 40900-78200 | 122 | 83 | 39 |
| 15 | ಹಿರಿಯ ರಾಸಾಯನಿಕ ತಜ್ಞರು | 40900-78200 | 1 | 0 | 1 |
| 16 | ಸಹಾಯಕ ಲೆಕ್ಕಾಧಿಕಾರಿಗಳು | 47600-151100 | 5 | 3 | 2 |
| | **ಗ್ರೂಪ್-ಬಿ ಒಟ್ಟು** | | **129** | **87** | **42** |
| 17 | ಕಿರಿಯ ರಾಸಾಯನಿಕ ತಜ್ಞರು | 33450-62600 | 2 | 0 | 2 |
| 18 | ಪ್ರಯೋಗಾಲಯ ಸಹಾಯಕರು | 21400-42000 | 2 | 0 | 2 |
| 19 | ಕಛೇರಿ ಅಧೀಕ್ಷಕರು | 37900-70850 | 47 | 45 | 2 |
| 20 | ಅಬಕಾರಿ ನಿರೀಕ್ಷಕರು | 37900-70850 | 500 | 431 | 69 |
| 21 | ಅಬಕಾರಿ ಉಪ ನಿರೀಕ್ಷಕರು | 30350-58250 | 661 | 351 | 310 |
| 22 | ಪ್ರಥಮ ದರ್ಜೆ ಸಹಾಯಕರು | 27650-52650 | 295 | 167 | 128 |
| 23 | ಶೀಘ್ರಲಿಪಿಗಾರರು | 27650-52650 | 58 | 24 | 34 |
| 24 | ದ್ವಿತೀಯ ದರ್ಜೆ ಸಹಾಯಕರು | 21400-42000 | 364 | 232 | 132 |
| 25 | ಬೆರಳಚ್ಚುಗಾರರು | 21400-42000 | 50 | 5 | 45 |

| | | | | | |
|---|---|---|---|---|---|
| 26 | ಹಿರಿಯ ಅಬಕಾರಿ ರಕ್ಷಕರು | 23500–47650 | 383 | 241 | 142 |
| 27 | ಅಬಕಾರಿ ರಕ್ಷಕರು | 21400–42000 | 2591 | 1980 | 611 |
| 28 | ಹಿರಿಯ ವಾಹನ ಚಾಲಕರು | 27650–52650 | 83 | 69 | 14 |
| 29 | ವಾಹನ ಚಾಲಕರು | 21400–42000 | 386 | 278 | 108 |
| | **ಗ್ರೂಪ್–ಸಿ ಒಟ್ಟು** | | **5422** | **3823** | **1599** |
| 30 | ಗ್ರೂಪ್ ಡಿ ನೌಕರರು | 17000–28950 | 113 | 79 | 34 |
| | **ಗ್ರೂಪ್–ಡಿ ಒಟ್ಟು** | | 113 | **79** | **34** |
| | **ಒಟ್ಟು** | | **5,811** | **4,080** | **1,731** |

## 5.2 ಎ, ಬಿ, ಸಿ ಮತ್ತು ಡಿ ಗುಂಪುಗಳಲ್ಲಿನ ಹುದ್ದೆಗಳು ಮತ್ತು 2020–21 ರಲ್ಲಿನ ನಿವೃತ್ತಿಗಳು :

### 5.2.1 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳು.

| ಕ್ರ.ಸಂ | ಗ್ರೂಪ್ 'ಎ' | | | | |
|---|---|---|---|---|---|
| | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು | (+) ಅಥವಾ (–) | 2020–21ನೇ ವರ್ಷದಲ್ಲಿ ಆದ ನಿವೃತ್ತಿಗಳು |
| 1. | 147 | 91 | 56 | – | 03 |

| ಕ್ರ.ಸಂ | ಗ್ರೂಪ್ 'ಬಿ' | | | | |
|---|---|---|---|---|---|
| | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು | (+) ಅಥವಾ (–) | 2020–21ನೇ ವರ್ಷದಲ್ಲಿ ಆದ ನಿವೃತ್ತಿಗಳು |
| 1. | 129 | 87 | 42 | – | 03 |

### 5.2.2 ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳು.

| ಕ್ರ. ಸಂ | ಪದನಾಮ | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆ | ಖಾಲಿ ಇರುವ ಹುದ್ದೆ | 2020–21ನೇ ವರ್ಷದಲ್ಲಿ ಆದ ನಿವೃತ್ತಿಗಳು |
|---|---|---|---|---|---|
| 1 | ಅಬಕಾರಿ ನಿರೀಕ್ಷಕರು | 500 | 431 | 69 | – |
| 2 | ಅಬಕಾರಿ ಉಪ ನಿರೀಕ್ಷಕರು | 661 | 351 | 310 | 2 |
| 3 | ಕಛೇರಿ ಅಧೀಕ್ಷಕರು | 47 | 45 | 2 | – |
| 4 | ಕಿರಿಯ ರಾಸಾಯನಿಕ ತಜ್ಞರು | 02 | 0 | 02 | – |
| 5 | ಪ್ರಥಮ ದರ್ಜೆ ಸಹಾಯಕರು | 295 | 167 | 128 | – |
| 6 | ಶೀಘ್ರಲಿಪಿಗಾರರು | 58 | 24 | 34 | – |
| 7 | ದ್ವಿತೀಯ ದರ್ಜೆ ಸಹಾಯಕರು | 364 | 232 | 132 | – |
| 8 | ಪ್ರಯೋಗಾಲಯ ಸಹಾಯಕರು | 02 | 0 | 02 | – |
| 9 | ಬೆರಳಚ್ಚುಗಾರರು | 50 | 05 | 45 | – |
| 10 | ಅಬಕಾರಿ ಹಿರಿಯ ರಕ್ಷಕ | 383 | 241 | 142 | 03 |

| | | | | | |
|---|---|---|---|---|---|
| 11 | ಅಬಕಾರಿ ರಕ್ಷಕ | 2591 | 1980 | 611 | 39 |
| 12 | ಹಿರಿಯ ವಾಹನ ಚಾಲಕ/ ವಾಹನ ಚಾಲಕ | 469 | 347 | 122 | - |
| 13 | ಗ್ರೂಪ್-ಡಿ | 113 | 79 | 34 | 04 |
| ಒಟ್ಟು | | **5,535** | **3,902** | **1,633** | **48** |

## 5.3. ವೃಂದ ವಾರು ಮತ್ತು ಲಿಂಗವಾರು ಅಧಿಕಾರಿಗಳು ಮತ್ತು ಸಿಬ್ಬಂದಿ :

### 5.3.1. ವೃಂದ 'ಎ' ಮತ್ತು 'ಬಿ' :

| ವೃಂದ 'ಎ' | | | | | |
|---|---|---|---|---|---|
| ಪುರುಷರು | ಮಹಿಳೆಯರು | ಒಟ್ಟು | ಎಸ್. ಸಿ. | ಎಸ್. ಟಿ. | ಒಟ್ಟು |
| 71 | 20 | 91 | 17 | 7 | 24 |
| ವೃಂದ 'ಬಿ' | | | | | |
| ಪುರುಷರು | ಮಹಿಳೆಯರು | ಒಟ್ಟು | ಎಸ್. ಸಿ. | ಎಸ್. ಟಿ. | ಒಟ್ಟು |
| 81 | 6 | 87 | 14 | 5 | 19 |

### 5.3.2 ವೃಂದ 'ಸಿ' ಮತ್ತು 'ಡಿ'

| ಕ್ರ.ಸಂ | ಪದನಾಮ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸು ತ್ತಿರುವ ಹುದ್ದೆ | ಪುರುಷರು | ಮಹಿಳೆ ಯರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
|---|---|---|---|---|---|---|---|
| 1. | ಅಬಕಾರಿ ನಿರೀಕ್ಷಕರು | 500 | 431 | 304 | 127 | 81 | 14 |
| 2. | ಅಬಕಾರಿ ಉಪ ನಿರೀಕ್ಷಕರು | 661 | 351 | 276 | 75 | 47 | 10 |
| 3. | ಕಛೇರಿ ಅಧೀಕ್ಷಕರು | 47 | 45 | 28 | 17 | 11 | 2 |
| 4. | ಕಿರಿಯ ರಾಸಾಯನಿಕ ತಜ್ಞರು | 2 | 0 | 0 | 0 | 0 | 0 |
| 5. | ಪ್ರಥಮ ದರ್ಜೆ ಸಹಾಯಕರು | 295 | 167 | 128 | 39 | 37 | 10 |
| 6. | ಶೀಘ್ರಲಿಪಿಗಾರರು | 58 | 24 | 12 | 12 | 4 | 2 |
| 7. | ದ್ವಿತೀಯ ದರ್ಜೆ ಸಹಾಯಕರು | 364 | 232 | 161 | 71 | 54 | 9 |
| 8. | ಪ್ರಯೋಗಾಲಯ ಸಹಾಯಕರು | 2 | 0 | 0 | 0 | 0 | 0 |
| 9. | ಬೆರಳಚ್ಚುಗಾರರು | 50 | 5 | 3 | 2 | 1 | 1 |
| 10. | ಅಬಕಾರಿ ಹಿರಿಯ ರಕ್ಷಕ | 383 | 241 | 202 | 39 | 8 | 7 |
| 11. | ಅಬಕಾರಿ ರಕ್ಷಕ | 2591 | 1980 | 1855 | 125 | 416 | 116 |
| 12. | ಹಿರಿಯ ವಾಹನ ಚಾಲಕರು / ವಾಹನ ಚಾಲಕರು | 469 | 347 | 329 | 18 | 72 | 27 |
| 13. | ಗ್ರೂಪ್-ಡಿ | 113 | 79 | 37 | 42 | 18 | 5 |
| ಒಟ್ಟು | | **5,535** | **3,902** | **3,335** | **567** | **749** | **203** |

## 5.4 ನೇಮಕಾತಿ :

### 5.4.1. ಅಬಕಾರಿ ಉಪ ನಿರೀಕ್ಷಕರು

177 ಅಬಕಾರಿ ಉಪ ನಿರೀಕ್ಷಕರ ಹುದ್ದೆಗೆ ಅಂತಿಮ ಆಯ್ಕೆಪಟ್ಟಿಯನ್ನು ಕೆ.ಪಿ.ಎಸ್.ಸಿ.ಯು ಹೊರಡಿಸಿದ್ದು, ಅದರಂತೆ 151 ಅಭ್ಯರ್ಥಿಗಳಿಗೆ ಆದೇಶ ಹೊರಡಿಸಲಾಗಿದೆ.

### 5.4.2. ಅಬಕಾರಿ ರಕ್ಷಕರು

1,003 ಅಬಕಾರಿ ರಕ್ಷಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗದಿಂದ ಅಂತಿಮ ಆಯ್ಕೆಪಟ್ಟಿ ಸಲ್ಲಿಸಿದ್ದು, ಅದರಂತೆ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲು ಅಯಾ ಜಿಲ್ಲೆಗೆ ಕಳುಹಿಸಲಾಗಿರುತ್ತದೆ.

### 5.4.3 ವಾಹನ ಚಾಲಕರು

2011 ನೇ ಸಾಲಿನಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಲ್ಲಿ 100 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಿದ್ದು, ಜಿಲ್ಲಾ ಮಟ್ಟದಲ್ಲಿ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಈ ಪೈಕಿ 85 ವಾಹನ ಚಾಲಕರ ಹುದ್ದೆಗಳಿಗೆ ಜಿಲ್ಲಾ ಮಟ್ಟದಲ್ಲಿ ನೇಮಕಾತಿ ಆದೇಶಗಳನ್ನು ನೀಡಿದ್ದು, ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಅಬಕಾರಿ ಉಪ ಆಯುಕ್ತರಗಳಿಂದ ಕ್ರಮಕೈಗೊಳ್ಳಲಾಗುತ್ತಿದೆ.

ನೇರ ನೇಮಕಾತಿ ಅಡಿಯಲ್ಲಿ 188 ವಾಹನ ಚಾಲಕರ ಹುದ್ದೆಗಳನ್ನು 2014-15, 2015-16 ನೇ ಸಾಲಿಗೆ ತುಂಬಲು ಸರ್ಕಾರವು ಆರ್ಥಿಕ ಸಹಮತಿ ನೀಡಿದ್ದು, ಒಟ್ಟಾರೆ (100+188) 288 ಹುದ್ದೆಗಳ ಪೈಕಿ ಈಗಾಗಲೇ 235 ವಾಹನ ಚಾಲಕರು ಹುದ್ದೆಗಳನ್ನು ಜಿಲ್ಲಾ ಮಟ್ಟದಲ್ಲಿ ಭರ್ತಿ ಮಾಡಲಾಗಿದೆ. ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಜಿಲ್ಲಾ ಅಬಕಾರಿ ಉಪ ಆಯುಕ್ತರುಗಳಿಗೆ ಸೂಚನೆ ನೀಡಲಾಗಿದೆ.

### 5.4. 4 ಪ್ರಥಮ ದರ್ಜೆ ಸಹಾಯಕರು

ರಾಜ್ಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 31 ಪ್ರ.ದ.ಸ. ಹುದ್ದೆಗಳಿಗೆ ಭರ್ತಿ ಮಾಡುವ ಸಂಬಂಧ ಕರ್ನಾಟಕ ಲೋಕಸೇವಾ ಆಯೋಗದವರು ಅಧಿಸೂಚನೆ ಹೊರಡಿಸಿರುತ್ತದೆ.

### 5.4. 5 ಬೆರಳಚ್ಚುಗಾರರು

ರಾಜ್ಯ ಅಬಕಾರಿ ಇಲಾಖೆಯಲ್ಲಿನ 02 ಬೆರಳಚ್ಚುಗಾರರ (ಹೈದ್ರಾಬಾದ್-ಕರ್ನಾಟಕ ಭಾಗದ) ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆಪಟ್ಟಿ ಸಲ್ಲಿಸಿದ್ದು, ಸದರಿ ಹುದ್ದೆಗಳಿಗೆ ಅಬಕಾರಿ ಉಪ ಆಯುಕ್ತರು, ನೇಮಕಾತಿ ಪ್ರಾಧಿಕಾರಿಗಳಾಗಿರುವುದರಿಂದ ನೇಮಕಾತಿ ಆದೇಶ ಹೊರಿಡಿಸಲು ಜಿಲ್ಲಾ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.

## 5. 5.5 ತರಬೇತಿ :-

| ಕ್ರ ಸಂ | ತರಬೇತಿ ವಿಷಯ | ತರಬೇತಿ ಅವಧಿ | ತರಬೇತಿಗೆ ನಿಯೋಜಿಸಲಾದ ಅಧಿಕಾರಿಗಳ ಸಂಖ್ಯೆ |
|---|---|---|---|
| 1 | ರಿಫ್ರೇಶರ್ ಕೋರ್ಸ್ ಅನ್ ಎಕ್ಸೈಸ್ ಟ್ಯಾಕ್ಸೇಷನ್ (ಇಟಿ) | 10-11-2020 to 13-11-2020 | 07 ಗ್ರೂಪ್'ಎ' ಮತ್ತು 08 ಗ್ರೂಪ್' 'ಬಿ' ಅಧಿಕಾರಿಗಳು |
| 2 | ಟ್ರೇನಿಂಗ್ ಪ್ರೋಗ್ರಾಮ್ ಅನ್ ಕೋರ್ಟ್ ಕೇಸ್ ಮ್ಯಾಟ್ಸರ್ಸ್ (ಸಿಸಿಎಂ) | 15-12-2020 to 18-12-2020 | 13 ಗ್ರೂಪ್'ಎ' ಮತ್ತು 02 ಗ್ರೂಪ್' 'ಬಿ' ಅಧಿಕಾರಿಗಳು |
| 3 | ಟ್ರೇನಿಂಗ್ ಪ್ರೋಗ್ರಾಮ್ ಅನ್ ಅಕೌಂಟಿಂಗ್ ಅಂಡ್ ಆಡಿಟಿಂಗ್ (ಎಎಪಿ) | 19-10-2020 to 22-10-2020 | 07 ಗ್ರೂಪ್'ಎ' ಮತ್ತು 08 ಗ್ರೂಪ್' 'ಬಿ' ಅಧಿಕಾರಿಗಳು |
| 4 | ಕ್ರೈಂ ಪ್ರೀವ್ರೇಂಟಿವ್ ಮೆಶರ್ಸ್ ಅಂಡ್ ಕ್ರಿಸಿಸ್ ಮ್ಯಾನೇಜ್‌ಮೆಂಟ್ (ಸಿಪಿಎಂ) | 15-02-2021 to 20-02-2021 | 08 ಗ್ರೂಪ್'ಎ' ಮತ್ತು 15 ಗ್ರೂಪ್' 'ಬಿ' ಅಧಿಕಾರಿಗಳು |
| 5 | ಕರ್ನಾಟಕ ಎಕ್ಸೈಸ್ ಅಕ್ಟ್ ಮತ್ತು ಕನೆಕ್ಟಡ್ ರೂಲ್ಸ್ (ಕೆಇಎ) | 11-01-2021 to 18-01-2021 | 06 ಗ್ರೂಪ್'ಎ' ಮತ್ತು 24 ಗ್ರೂಪ್' 'ಬಿ' ಅಧಿಕಾರಿಗಳು |
| 6 | ಕರ್ನಾಟಕ ಎಕ್ಸೈಸ್ ಅಕ್ಟ್ ಮತ್ತು ಕನೆಕ್ಟಡ್ ರೂಲ್ಸ್ (ಕೆಇಎ) | 11-01-2021 to 18-01-2021 | ಅಬಕಾರಿ ನಿರೀಕ್ಷಕರುಗಳು -25 |
| 7 | ಓರಿಯನ್ಟೇಷನ್ ಕೋರ್ಸ್ ಅನ್ ಡ್ರಗ್ ಲಾ ಎನ್ ಫೋರ್ಸ್ ಮೆಂಟ್ | 10-08-2020 to 14-08-2020<br>07-09-2020 to 11-09-2020<br>05-10-2020 to 09-10-2020<br>03-11-2020 to 07-11-2020<br>07-12-2020 to 11-12-2020<br>04-01-2021 to 08-01-2021 | ಅಬಕಾರಿ ನಿರೀಕ್ಷಕರುಗಳು -150 |
| 8 | DDO's ಅಧಿಕಾರಿಗಳಿಗೆ ಡ್ಯೂಟಿಸ್ ಅಂಡ್ ಡೆಲಿಗೇಷನ್ ಡ್ರಾಯಿಂಗ್ ಮತ್ತು ಡಿಸ್ಬಾಸಿಂಗ್ ಆಫೀಸ್ (ಡಿಡಿಓ) | 09-02-2021 to 10-02-2021 | 25 ಗ್ರೂಪ್' 'ಬಿ' ಅಧಿಕಾರಿಗಳು |
| | | **ಒಟ್ಟು** | **298 ಅಧಿಕಾರಿಗಳು** |

**ಆಡಳಿತ ತರಬೇತಿ ಸಂಸ್ಥೆ, ಮೈಸೂರು ಜಿಲ್ಲೆ ಇಲ್ಲಿ ತರಬೇತಿಗೆ ನಿಯೋಜಿಸಲಾದ ಅಧಿಕಾರಿಗಳ ವಿವರ**

ಯಾವುದು ಇಲ್ಲ.

### 5.6 ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು.

ಸರ್ಕಾರದ ಪತ್ರ ಸಂಖ್ಯೆ: ಆಇ/148/ಇಪಿಎಸ್/2010 ದಿನಾಂಕ: 06-12-2010 ಮತ್ತು ಎಎಇ/107/ಇಪಿಎಸ್/2014 ದಿನಾಂಕ: 27-10-2014 ರಂತೆ ಅಬಕಾರಿ ಇಲಾಖೆಯಲ್ಲಿನ ಬೆರಳಚ್ಚುಗಾರರ ನೇರ ನೇಮಕಾತಿ ಹುದ್ದೆಗಳನ್ನು ಹೊರಗುತ್ತಿಗೆ (Out source) ಆಧಾರದಲ್ಲಿ ಖಾಲಿ ಇರುವ 11 ಬೆರಳಚ್ಚುಗಾರರ ಹುದ್ದೆಗಳನ್ನು ಕಿಯೋನಿಕ್ಸ್ ಮೂಲಕ ಅಬಕಾರಿ ಆಯುಕ್ತರ ಕಛೇರಿಯಲ್ಲಿ ನೇಮಿಸಿಕೊಳ್ಳಲಾಗಿರುತ್ತದೆ.

## 5.7 ಪ್ರಶಸ್ತಿ / ಪದಕಗಳು:-

ಯಾವುದು ಇಲ್ಲ.

## 5.8 ಅಧೀನ ಕಚೇರಿಗಳ ತಪಾಸಣೆ:

### 5.8.1. ಅಬಕಾರಿ ಜಂಟಿ ಆಯುಕ್ತರು / ಉಪ ಆಯುಕ್ತರು ನಡೆಸಿದ ತಪಾಸಣೆಗಳು:

| ಕ್ರ ಸಂ. | ತಪಾಸಣೆ ಮಾಡಿರುವ ಅಧಿಕಾರಿಗಳ ಪದನಾಮ/ ತಪಾಸಣೆ ಮಾಡಿದ ಕಚೇರಿಗಳ ವಿವರ | ದಿನಾಂಕ |
|---|---|---|
| 1 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 19-6-2020 |
| 2 | ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ | 17-6-2020 |
| 3 | ಅಬಕಾರಿ ಉಪ ಆಯುಕ್ತರು, ಹಾಸನ | 12-6-2020 |
| 4 | ಅಬಕಾರಿ ಉಪ ಆಯುಕ್ತರು, ಗದಗ | 06-6-2020 |
| 5 | ಅಬಕಾರಿ ಉಪ ಆಯುಕ್ತರು, ಗದಗ | 05-6-2020 |
| 6 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 06-6-2020 |
| 7 | ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ | 03-6-2020 |
| 8 | ಅಬಕಾರಿ ಉಪ ಆಯುಕ್ತರು, ಬೆಂಗಳೂರು ಗ್ರಾಮಾಂತರ ಜಿಲ್ಲೆ | 06-6-2020 |
| 9 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 30-5-2020 |
| 10 | ಅಬಕಾರಿ ಉಪ ಆಯುಕ್ತರು, ಬೆಂಗಳೂರು ಉತ್ತರ | 29-5-2020 |
| 11 | ಅಬಕಾರಿ ಉಪ ಆಯುಕ್ತರು, ಬೆಂಗಳೂರು ಪೂರ್ವ | 29-5-2020 |
| 12 | ಅಬಕಾರಿ ಉಪ ಆಯುಕ್ತರು, ಬಾಲಗಕೋಟೆ | 28-5-2020 |
| 13 | ಅಬಕಾರಿ ಉಪ ಆಯುಕ್ತರು, ದಾವಣಗೆರೆ | 2-6-2020 |
| 14 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಂಗಳೂರು) | 30-5-2020 |
| 15 | ಅಬಕಾರಿ ಉಪ ಆಯುಕ್ತರು, ಹಾಸನ | 27-7-2020 |
| 16 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 29-7-2020 |
| 17 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 01-7-2020 |
| 18 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 15-6-2020 |
| 19 | ಅಬಕಾರಿ ಉಪ ಆಯುಕ್ತರು, ಕೋಲಾರ | 12-6-2020 |
| 20 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಕಲಬುರಗಿ) | 22-6-2020 |
| 21 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 30-5-2020 |
| 22 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 29-6-2020 |
| 23 | ಅಬಕಾರಿ ಉಪ ಆಯುಕ್ತರು, ಧಾರವಾಡ | 25-11-2020 |
| 24 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 05-12-2020 |
| 25 | ಅಬಕಾರಿ ಉಪ ಆಯುಕ್ತರು, ಕೋಲಾರ | 08-12-2020 |
| 26 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 08-01-2021 |
| 27 | ಅಬಕಾರಿ ಉಪ ಆಯುಕ್ತರು, ದಾವಣಗೆರೆ | 13-01-2021 |

| | | |
|---|---|---|
| 28 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 16-01-2021 |
| 29 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 18-01-2021 |
| 30 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 19-01-2021 |
| 31 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 19-01-2021 |
| 32 | ಅಬಕಾರಿ ಉಪ ಆಯುಕ್ತರು, ಮೈಸೂರು ಗ್ರಾಮಾಂತರ | 19-01-2021 |
| 33 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 21-01-2021 |
| 34 | ಅಬಕಾರಿ ಉಪ ಆಯುಕ್ತರು, ಹಾಸನ | 22-01-2021 |
| 35 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 25-01-2021 |
| 36 | ಅಬಕಾರಿ ಉಪ ಆಯುಕ್ತರು, ಕೋಲಾರ | 29-01-2021 |
| 37 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 08-02-2021 |
| 38 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 19-02-2021 |
| 39 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 23-02-2021 |
| 40 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 24-02-2021 |
| 41 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 24-02-2021 |
| 42 | ಅಬಕಾರಿ ಉಪ ಆಯುಕ್ತರು, ಮಂಡ್ಯ | 24-02-2021 |
| 43 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 25-02-2021 |
| 44 | ಅಬಕಾರಿ ಉಪ ಆಯುಕ್ತರು, ಹಾಸನ | 25-02-2021 |
| 45 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 17-03-2021 |
| 46 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಹೊಸಪೇಟೆ) | 25-03-2021 |
| 47 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 29-03-2021 |
| 48 | ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ (ಬೆಳಗಾಂ) | 30-03-2021 |
| 49 | ಅಬಕಾರಿ ಉಪ ಆಯುಕ್ತರು, ಮೈಸೂರು ಗ್ರಾಮಾಂತರ | 31-03-2021 |

### 5.8.2. ಅಬಕಾರಿ ಆಯುಕ್ತರ ಕಛೇರಿಯ ಅಧಿಕಾರಿ/ನೌಕರರು ನಡೆಸಿದ ತಪಾಸಣೆಗಳು:

| ಕ್ರ ಸಂ. | ತಪಾಸಣೆ ಮಾಡಿರುವ ಅಧಿಕಾರಿಗಳ ಪದನಾಮ | ತಪಾಸಣೆ ಮಾಡಿದ ಕಛೇರಿಗಳ ವಿವರ | ದಿನಾಂಕ |
|---|---|---|---|
| 1 | ಅಬಕಾರಿ ಆಯುಕ್ತರು | ಅಬಕಾರಿ ಉಪ ಆಯುಕ್ತರ ಕಛೇರಿ, ಬಿಯುಡಿ–5 | 14–10–2020 |
| 2 | ಅಬಕಾರಿ ಆಯುಕ್ತರು | ಅಬಕಾರಿ ಉಪ ಆಯುಕ್ತರ ಕಛೇರಿ, ಬಿಯುಡಿ–3,4,8 | 15–10–2020 |
| 3 | ಅಬಕಾರಿ ಆಯುಕ್ತರು | ಅಬಕಾರಿ ಉಪ ಆಯುಕ್ತರ ಕಛೇರಿ, ಬಿಯುಡಿ–7 | 16–10–2020 |
| 4 | ಅಬಕಾರಿ ಆಯುಕ್ತರು | ಅಬಕಾರಿ ಉಪ ಆಯುಕ್ತರ ಕಛೇರಿ, ಬಿಯುಡಿ–2 | 21–10–2020 |

# ಅಧ್ಯಾಯ – 6

## 6.1 ಅಧೀನ ಕಛೇರಿಗಳ ಆಂತರಿಕ ಲೆಕ್ಕ ಪರಿಶೋಧನೆ ಮತ್ತು ಕಛೇರಿ ತಪಾಸಣೆ.

**6.1.1 ಈ ಕಛೇರಿಯ ಸಿಬ್ಬಂದಿ ಮತ್ತು ಲೆಕ್ಕ ವಿಭಾಗದ ಸಿಬ್ಬಂದಿಯವರಿಂದ ಅಧೀನ ಕಛೇರಿ ತಪಾಸಣೆ ಮತ್ತು ಆಂತರಿಕ ಲೆಕ್ಕ ಪರಿಶೋದನೆಗೆ ಒಳಪಟ್ಟಿರುವ ಕಛೇರಿಗಳು.**

| ಕಛೇರಿ | ಸಂಖ್ಯೆ |
|---|---|
| ಅಬಕಾರಿ ಉಪ ಆಯುಕ್ತರ ಕಛೇರಿಗಳು | – |
| ಉಪ ವಿಭಾಗಗಳು | – |
| ವಲಯ ಕಛೇರಿಗಳು | – |
| ಡಿಸ್ಟಲರಿ | – |
| ಒಟ್ಟು | – |

**6.1.2 ಹಣ ಮೌಲ್ಯವನ್ನು ಒಳಗೊಂಡ ಕಂಡಿಕೆಗಳು ಮತ್ತು ಮೊತ್ತ :**

| ಕಛೇರಿ | ಕಂಡಿಕೆಗಳು | ಮೊತ್ತ (ರೂ.) |
|---|---|---|
| ಅಬಕಾರಿ ಜಂಟಿ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ಅಬಕಾರಿ ಉಪ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ವಲಯಗಳು | ಇಲ್ಲ | ಇಲ್ಲ |
| ಭಟ್ಟಿ ಕಾರ್ಖಾನೆಗಳು | ಇಲ್ಲ | ಇಲ್ಲ |
| ಉಪ ವಿಭಾಗಗಳು | ಇಲ್ಲ | ಇಲ್ಲ |
| ರಾಜ್ಯ ವಿಚಕ್ಷಣ ದಳ | ಇಲ್ಲ | ಇಲ್ಲ |
| ಒಟ್ಟು | ಇಲ್ಲ | ಇಲ್ಲ |

**6.1.3 ಇತ್ಯರ್ಥಗೊಂಡ ಅಡಿಟ್ ಪ್ಯಾರಗಳು ಹಾಗೂ ಮೌಲ್ಯ :**

| ಕಛೇರಿ | ಕಂಡಿಕೆಗಳು | ಮೊತ್ತ (ರೂ.) |
|---|---|---|
| ಅಬಕಾರಿ ಉಪ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ಉಪ ವಿಭಾಗಗಳು | ಇಲ್ಲ | ಇಲ್ಲ |
| ಭಟ್ಟಿ ಕಾರ್ಖಾನೆಗಳು | ಇಲ್ಲ | ಇಲ್ಲ |
| ಒಟ್ಟು | ಇಲ್ಲ | ಇಲ್ಲ |

**6.2 ವಿಧಾನ ಸಭೆ ಮತ್ತು ವಿಧಾನ ಪರಿಷತ್ ಅಧಿವೇಶನಗಳಲ್ಲಿ ಸ್ವೀಕರಿಸಲಾದ / ಉತ್ತರಿಸಲಾದ ಪ್ರಶ್ನೆಗಳು:**

| ಅಧಿವೇಶನ | ಚುಕ್ಕೆ ಗುರುತಿನ ಪ್ರಶ್ನೆಗಳು | | ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು | |
|---|---|---|---|---|
| | ಸ್ವೀಕೃತ | ಉತ್ತರಿಸಲಾದ | ಸ್ವೀಕೃತ | ಉತ್ತರಿಸಲಾದ |
| ವಿಧಾನ ಸಭೆ | 03 | 03 | 120 | 120 |
| ವಿಧಾನ ಪರಿಷತ್ | – | – | 77 | 77 |

**6.3 ವಿವಿಧ ನ್ಯಾಯಾಲಯಗಳು ಹಾಗೂ ಟ್ರಿಬ್ಯೂನಲ್‌ಗಳಲ್ಲಿ ಇಲಾಖೆ ವತಿಯಿಂದ ಹಾಗೂ ಇಲಾಖೆಯ ವಿರುದ್ದವಾಗಿ ಇರುವ ಪ್ರಕರಣಗಳು**

### 6.3.1 ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾಖಲಿಸಲಾದ ಪ್ರಕರಣಗಳು (ರಿಟ್ ವಿಭಾಗ).

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 101 |
| ಸ್ವೀಕರಿಸಲಾದ ಪ್ರಕರಣಗಳು | 114 |
| **ಒಟ್ಟು** | **215** |
| ಆದೇಶಗಳನ್ನು ಹೊರಡಿಸಿರುವುದು | 53 |
| **ಬಾಕಿ ಪ್ರಕರಣಗಳು** | **162** |

### 6.3.2 ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ (ಸೇವಾ ವಿಷಯ) ದಾಖಲಿಸಲಾದ ಪ್ರಕರಣಗಳ (ರಿಟ್ ವಿಭಾಗ).

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 07 |
| ಸ್ವೀಕರಿಸಲಾದ ಪ್ರಕರಣಗಳು | 06 |
| **ಒಟ್ಟು** | **13** |
| ಆದೇಶಗಳನ್ನು ಹೊರಡಿಸಿರುವುದು | 03 |
| **ಬಾಕಿ ಪ್ರಕರಣಗಳು** | **10** |

### 6.3.3 ಕರ್ನಾಟಕ ಮೇಲ್ಮಾನವಿ ಪ್ರಾಧಿಕಾರದಲ್ಲಿ (ಕೆಎಟಿ) ದಾಖಲಿಸಲಾದ ಪ್ರಕರಣಗಳು

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 65 |
| ಸ್ವೀಕರಿಸಲಾದ ಪ್ರಕರಣಗಳು | 04 |
| **ಒಟ್ಟು** | **69** |
| ಆದೇಶಗಳನ್ನು ಹೊರಡಿಸಿರುವುದು | 06 |
| **ಬಾಕಿ ಪ್ರಕರಣಗಳು** | **63** |

### 6.3.4 ಕರ್ನಾಟಕ ಆಡಳಿತ ಮಂಡಳಿಯಲ್ಲಿ (ಕೆಎಟಿ) ದಾಖಲಿಸಲಾದ ಪ್ರಕರಣಗಳು (ಆಡಳಿತಾತ್ಮಕ ವಿಷಯಗಳು)

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 116 |
| ಸ್ವೀಕರಿಸಲಾದ ಪ್ರಕರಣಗಳು | 72 |
| **ಒಟ್ಟು** | **188** |
| ಆದೇಶಗಳನ್ನು ಹೊರಡಿಸಿರುವುದು | 105 |
| **ಬಾಕಿ ಪ್ರಕರಣಗಳು** | **83** |

### 6.3.5 ಅಬಕಾರಿ ಆಯುಕ್ತರ ನ್ಯಾಯಾಲಯದಲ್ಲಿ (ಮನವಿ) ದಾಖಲಿಸಲಾದ ಪ್ರಕರಣಗಳು.

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 101 |
| ಸ್ವೀಕರಿಸಲಾದ ಪ್ರಕರಣಗಳು | 171 |
| **ಒಟ್ಟು** | **272** |
| ಆದೇಶಗಳನ್ನು ಹೊರಡಿಸಿರುವುದು | 161 |
| **ಬಾಕಿ ಪ್ರಕರಣಗಳು** | **111** |

### 6.4 ಮಾಹಿತಿ ಹಕ್ಕು ಅಧಿನಿಯಮದ ಜಾರಿ:

ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕರಿಸಲಾದ ಆರ್.ಟಿ.ಐ ಅರ್ಜಿಗಳ ವಿವರ

| ಕ್ರ.ಸಂ. | ವಿವರಗಳು | ಸಂಖ್ಯೆ |
|---|---|---|
| 1. | ಪ್ರಾರಂಭಿಕ ಶಿಲ್ಕು | 42 |
| 2. | ಸ್ವೀಕೃತ ಒಟ್ಟು ಅರ್ಜಿಗಳು | 5137 |
| 3. | ಉತ್ತರಿಸಲಾದ ಅರ್ಜಿಗಳು | 5132 |
| 4. | ಅರ್ಜಿದಾರರಿಂದ ನಿಗದಿತ ಶುಲ್ಕಪಾವತಿಯಾಗದಿರುವುದು. | 365 |
| 5. | ನಿಯಮ 8(1)(ಹೆಚ್) ಮತ್ತು ನಿಯಮ 14ರಡಿ ಉತ್ತರಿಸಲಾದ ಅರ್ಜಿಗಳು | 73 |
| 6. | ಬಾಕಿ (30 ದಿನಗಳ ಸಮಯದ ಒಳಗೆ) | 47 |
| 7. | ಮಾಹಿತಿ ಆಯೋಗದಲ್ಲಿ ಮೇಲ್ಮನವಿಗಾಗಿ ಇರುವ ಬಾಕಿ ಅರ್ಜಿಗಳು | 01 |

ಅಬಕಾರಿ ಆಯುಕ್ತರು